ಮಾನ್ಯ ಉಪಾಧ್ಯಕ್ಷರೆ 1999 ರ ಕರ್ನಾಟಕ ಸಂಸದೀಯ ಕಾರ್ಯದರ್ಶಿಗಳ ಭತ್ಯೆಗಳ ತಿದ್ದುಪಡಿ *ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.*

ಉಪಾಧ್ಯಕ್ಷರು ವಿಧೇಯಕವನ್ನು ಮಂಡಿಸಲಾಗಿದೆ.

(2)ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ)ವಿಧೇಯಕ 1999 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು) (ವಸತಿ ಸಚಿವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ 1999ರ ಕರ್ನಾಟಕ ಗೃಹ ನಿರ್ಮಾಣ ಮಂಡಲಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

1999ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಚಿವರು) (ವಸತಿ ಸಚಿವರ ಪರವಾಗಿ) :- ಮಾನ್ಯ ಉಪಾಧ್ಯಕ್ಷರೆ 1999 ರ ಕರ್ನಾಟಕ ಗೃಹ ನಿರ್ಮಾಣ ಮಂಡಳಿ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾದ್ಯಕ್ಷರು : ** ವಿಧೇಯಕವನ್ನು ಮಂಡಿಸಲಾಗಿದೆ.**

ಉಪಾಧ್ಯಕ್ಷರು : ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 1999 ಅನ್ನು ಮಾನ್ಯ ಮಂತ್ರಿಗಳು ಮಂಡಿಸುವುದು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು :- ಮಾನ್ಯ ಉಪಾಧ್ಯಕ್ಷರು 1999ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಶ್ರೀ ಎಂ ವೈ. ಘೋರ್ಪಡೆ (ಸೊಂಡೂರು) - ಇದು ಎಷ್ಟರ ಮಟ್ಟಿಗೆ ಸಮರ್ಪಕವೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ. ಹೈಕೋರ್ಟ್‌ನವರು ಬಹಳ ಸ್ಪಷ್ಟವಾಗಿ ಇದನ್ನು ಇಗ್ನೋರ ಮಾಡಬೇಕು ಇದು ಸಂವಿಧಾನವನ್ನು ಹೊಡೆದು ಹಾಕುವುದಕೋಸ್ಕರ ಮಾಡಿರತಕ್ಕಂಥ ಒಂದು ತಂತ್ರ ಎನ್ನುವ ದಾಟಿಯಲ್ಲಿ ಹೇಳಿದ್ದಾರೆ. ಅವರು ಕೊಟ್ಟಂಥ ತೀರ್ಪನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿ ಈ ವಿಧೇಯಕವನ್ನು ಇಲ್ಲಿ ಮಂಡಿಸಿದರೆ ಹೇಗೆ ? ತಾವು ಮಾಡಿರುವ ಸುಗ್ರೀವಾಜ್ಞೆಗೋಸ್ಕರವಾಗಿ ತಾವು ಈ ಬಿಲ್‌ನ್ನು ತಂದಿರುವುದು. ಈ ರೀತಿ ಮಂಡನೆ ಮಾಡಿದರೆ ಏನು ಅರ್ಥವಾಗುತ್ತದೆ. ಹೈಕೋರ್ಟ್ ಹೇಳಿರುವ ಬಗ್ಗೆ ತಮಗೆ ಯಾವುದೇ ವಿಶ್ವಾಸ ಹಾಗೂ ಆದರ ಇಲ್ಲವೆಂದು ಅರ್ಥವಾಗುತ್ತದೆ. ಈ ಸರ್ಕಾರದ ಉದ್ದೇಶವೇನು ಎಂಬುದನ್ನು ಮೊದಲು ಹೇಳಿ.

---

* ಸಹಬಂಧ I

** ಸಹಬಂಧ II

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಹಿರಿಯರಿಗೆ ಗೊತ್ತಿರುವಂತೆ ತಮ್ಮ ಅಪ್ಪಣೆಯನ್ನು ಪಡೆದು ವಿಧೇಯಕವನ್ನು ಸದನದಲ್ಲಿ ಮಂಡಿಸತಕ್ಕಂಥದ್ದು. ಪರ್ಯಾಲೋಚನಾ ಸಂದರ್ಭದಲ್ಲಿ ತಾವು ಕೇಳಿರುವ ಎಲ್ಲಾ ಪ್ರಶ್ನೆಗಳಿಗೆ ನಾವು ಉತ್ತರಿಸುತ್ತೇವೆ. ಒಂದು ಶ್ರೇಷ್ಠ ನ್ಯಾಯಾಲಯದ ತೀರ್ಮಾನವನ್ನು ನಾವು ಸರ್ವಶ್ರೇಷ್ಠ ನ್ಯಾಯಾಲಯಕ್ಕೆ ಮೇಲ್ಮನವಿ ತೆಗೆದು ಕೊಂಡು ಹೋದರೆ ಅದಕ್ಕೆ ಅಗೌರವ ತೋರಿಸಿದಂತೆ ಅಲ್ಲ. ಸುಪ್ರಿಂಕೋರ್ಟ್‌ನಲ್ಲಿ ಇವತ್ತು ಹಿಯರಿಂಗ್ ನಡೆಯುತ್ತಿದೆ. ಸಂಜೆಯೊಳಗೆ ಅಲ್ಲಿ ಏನು ಫಲಶೃತಿ ಆಗುತ್ತದೆ ಎಂಬುದು ಗೊತ್ತಾಗುತ್ತದೆ. ತಮಗೆ ಗೊತ್ತಿರುವಂತೆ ಯಾವುದಾದರೊಂದು ಅಧ್ಯಾಧೇಪನ ಇದ್ದಾಗ ಅದು ಆರು ತಿಂಗಳೊಳಗಾಗಿ ಏನಾದರೂ ಅಧಿವೇಶನ ಇದ್ದಾಗ ಕಾನೂನು ವಿಧೇಯಕವಾಗಿ ಬರಬೇಕಾಗಿರುವ ಕಾರಣಕ್ಕಾಗಿ ಒಂದು ತಾಂತ್ರಿಕವಾದ ಈ ಕೆಲಸಕ್ಕಾಗಿ ನಾನು ಇಲ್ಲಿ ಮಂಡಿಸಿದ್ದೇನೆ. ಪರ್ಯಾಲೋಚನಾ ಸಂದರ್ಭದಲ್ಲಿ ತಾವು ಪ್ರಶ್ನೆ ಕೇಳಿದರೆ ನಾನು ಅದಕ್ಕೆ ಉತ್ತರಿಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಅಂಥ ಅವಸರ ತಮಗೆ ಏನು ಇತ್ತು? ಸುಪ್ರೀಂಕೋರ್ಟಿನ ತೀರ್ಮಾನ ತಮಗೆ ಗೊತ್ತಾದ ಮೇಲೆ ಇದನ್ನು ತಾವು ಮಾಡಬಹುದಲ್ಲವೆ? ಇವತ್ತೇ ಮಾಡಬೇಕಾದ ಅವಶ್ಯಕತೆ ಏನಿತ್ತು? ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ನಾವು ಹೋಗುತ್ತೇವೆಂದು ತಾವು ಹೇಳಿರುತ್ತೀರಿ ನಾನು ಇದನ್ನು ಒಪ್ಪುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ತಾವು ಕೂಡ ಅವರು ಕೊಟ್ಟಂಥ ತೀರ್ಮಾನವನ್ನು ನೋಡಿದ್ದೀರಿ ಕರ್ನಾಟಕ ಶ್ರೇಷ್ಠ ನ್ಯಾಯಾಲಯ ನಾವು ತಂದಿರುವಂಥ ಅಧ್ಯಾಧೇಪನ ತಪ್ಪಾಗಿದೆ ಎಂದು ಹೇಳಿಲ್ಲ ಅಸಿಂಧುವಾಗಿದೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿಲ್ಲ. ಈ ರೀತಿ ಇರುವಾಗ ಸುಪ್ರೀಂಕೋರ್ಟಿನಲ್ಲಿ ಇವತ್ತು ಹಿಯರಿಂಗ್ ನಡೆಯುತ್ತಿರುವುದರಿಂದ ಹಾಗೂ ನಮ್ಮ ಅಧಿವೇಶನ ನಾಳೆಯೇ ಮುಕ್ತಾಯವಾಗುವುದರಿಂದ ordinance has to be replaced. I am now complying to the provisions of law only.

ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದೆ ಎನ್ನುವ ಕಾರಣಕ್ಕಾಗಿಯೇ ಇಲ್ಲಿ ತಂದಿರುವುದು ಅಲ್ಲಿ ಏನು ತೀರ್ಮಾನ ಬರುತ್ತದೆ ಆ ತೀರ್ಮಾನದ ಸಂಪೂರ್ಣ ಪ್ರತಿಫಲ ಇದರಲ್ಲಿ ಇದ್ದೇ ಇರುತ್ತದೆ I cannot be prevented from moving the bill and getting it passed..

SRI M.Y. GHORPADE : Sir my submission is that the High Court has clearly stated in its judgment that this ordinance should be ignored not because it is within your competence but because it violates the implementation of the constitutional requirement. This being the case does it not so open defiance of High court opinion to bring this even while the supreme Court is considering it today that is all what i have to say.

SRI M.P.PRAKASH : Any particular order it is not a disrespect to the judgement that has been rendered. More over, according to us, according to the government there is a legal infirmity, infirmity to the extent that it has not been struck down as ultravires and now the direction has been given to the Election Commission to hold the election in accordance with

old provisions of law. How could there be a two sets of legislation to govern to a particular case. This is precisely the matter which is now adjudicated before the supreme Court and we are awaiting the judgement and in the meantime. I have to comply with the provisions of law and therefore that ordinance has to be replaced. So, I dont think anything that would contain us from not presenting the whole thing here

SRI M.Y. GHORPADE : I don to want to be abstinent but I want to reiterate once again when the state election commission has decided to go ahead with the elections in accordance with the High Court judgment and it is also very clear in the High Court judgment if this ordinance were to become a law then the election cannot be held as per the notification or the intentions of the Election Commission. So, it is clear that in the opinion of the High court the timing of this ordinance or this law defeats the constitutional provision. Therefore it is not appropriate for you to bring this bill.

J.C. MADHUSWAMY : ordinance itself is law. When they have kept it for ratification it is our privilege to know what is the contents of the bill,

ಇಂಟ್ರೊಡಕ್ಷನ್ ಸ್ಟೇಜ್‌ನಲ್ಲಿ ಮಾನ್ಯ ಸದಸ್ಯರು ಏತಕ್ಕಾಗಿ ಪ್ರಿವೆಂಟ್ ಮಾಡುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. Let him introduce the bill, ಸನ್ಮಾನ್ಯ ಘೋರ್ಪಡೆಯವರು ಹಿರಿಯರಿದ್ದಾರೆ ಇದೇನಾದರೂ, ಚರ್ಚೆಗೆ ಬಂದಾಗ ಚರ್ಚೆಮಾಡುವುದಕ್ಕೆ ಎಲ್ಲರಿಗೂ ಅವಕಾಶವಿರುತ್ತದೆ. We are all members. Let us know what is the contents of the bill.

M.P. PRAKASH : I fully agree with the views expressed by the Hon. member Sir. At the stage of Introduction whatever objections that have been raised by the senior hon member has to be brushed aside and I have to be permitted and now you have permitted me. Now at the time of taking it for consideration stage you may raise your objection.

ಉಪಾಧ್ಯಕ್ಷರು : ಬಿಲ್ ಚರ್ಚೆಗೆ ಬಂದಾಗ ಮಾತನಾಡೋಣ.

SRI M. Y. GHORPAGE : Before permitting it you have to take into all these opinions expressed and give an opinion.

ಉಪಾಧ್ಯಕ್ಷರು : ಚರ್ಚೆಗೆ ಬಂದಾಗ ಮಾತನಾಡೋಣ. ಈಗ ನಾನು ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1999ರ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕವನ್ನು ಮಂಡಿಸಲು ಅನುಮತಿ ನೀಡಲಾಯಿತು

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) : ಮಾನ್ಯ ಉಪಾಧ್ಯಕ್ಷರೆ 1999ರ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : * ವಿಧೇಯಕವನ್ನು ಮಂಡಿಸಲಾಗಿದೆ.*

ಶ್ರೀ ಜೆ. ಸಿ. ಮಾಧುಸ್ವಾಮಿ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ಧರಣಿಯನ್ನು ಕೈಬಿಟ್ಟು ಮರಳಿ ಅವರ ಸ್ಥಾನಕ್ಕೆ ಬರಬೇಕೆಂದು ತಾವು ಹೇಳಬೇಕು.

ಉಪಾಧ್ಯಕ್ಷರು : ನಾನು ಈಗಾಗಲೇ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸಣ್ಣ ಪ್ರಶ್ನೆಗೆ ಉತ್ತರ ಕಳುಹಿಸುವುದಕ್ಕೆ ಮಾನ್ಯ ಸಚಿವರು ಇಷ್ಟೊಂದು ತೊಂದರೆ ಮಾಡಿದರೆ ಹೇಗೆ? ನಮ್ಮ ಗೆಳೆಯನನ್ನು ಬಾವಿಗೆ ಬೀಳಿಸಿ ನಾವು ಇಲ್ಲಿ ನೋಡಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೇ?

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಜಯಚಂದ್ರರವರು ಮತ್ತು ಮಾನ್ಯ ರಾಮಸ್ವಾಮಿಯವರು ಹಿರಿಯರಿದ್ದಾರೆ ಮಾನ್ಯ ಉಪಾಧ್ಯಕ್ಷರ ಮೂಲಕ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಸಚಿವರು ನಾಳೆದಿವಸ ಖಂಡಿತವಾಗಿ ಸಾಧ್ಯವಾದಷ್ಟು ಉತ್ತರವನ್ನು ತರಿಸಿಕೊಡುತ್ತಾರೆ ಒಂದು ವೇಳೆ ಅದನ್ನು ತರಿಸಿಕೊಡುತ್ತೇನೆಂದು ಹೇಳುವುದೇ ಪ್ರಿವಿಲೇಜ್ ಆಗಬಾರದಲ್ಲವೆ? ಈಗಾಗಲೇ 7 ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಮಾಹಿತಿಯನ್ನು ತರಿಸಿಕೊಡುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ದಯಮಾಡಿ ತಾವು ತಮ್ಮ ಸ್ಥಾನಗಳಿಗೆ ಮರಳಿ ಬರಬೇಕು. ನಾನು ನಿಮಗೆ ಖಂಡಿತ ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಪ್ರಶ್ನೋತ್ತರ ವೇಳೆಯಲ್ಲಿ ಸಾಮಾನ್ಯವಾಗಿ ಧರಣಿ ಮಾಡುವುದಿಲ್ಲ ಇದು ಮಾನ್ಯ ರಾಮಸ್ವಾಮಿಯವರಿಗೂ ಗೊತ್ತು ಆದ್ದರಿಂದ ಮಾನ್ಯ ರಾಮಸ್ವಾಮಿಯವರು ದಯಮಾಡಿ ವಾಪಸ್ಸು ಬರಬೇಕು. ಇಲ್ಲದಿದ್ದರೆ ಬೇರೆ ಸಂಪ್ರದಾಯ ಪ್ರಾರಂಭವಾಗುತ್ತದೆ.

ಶ್ರೀ ಹೆಚ್. ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಬಾಕಿ ಉಳಿದಿರುವ ಎಲ್ಲಾ ಮಾಹಿತಿಗಳಿಗೂ ಉತ್ತರವನ್ನು ಒದಗಿಸಿಕೊಡುತ್ತೇನೆ. ಇದನ್ನು ಮುಚ್ಚಿಕೊಳ್ಳಬೇಕು ಅಥವಾ ಕೊಡಬಾರದೆಂಬ ಉದ್ದೇಶ ನನಗಿಲ್ಲ. ನಮ್ಮ ಬ್ರದರ್ ಇನ್-ಲಾ ತೀರಿಕೊಂಡಿದ್ದರಿಂದ ಸುಮಾರು 15 ದಿವಸಗಳ ಕಾಲ ಸದನಕ್ಕೆ ಬರದೇ ಇರುವುದರಿಂದ ನನಗೆ ಕಾನ್‌ಟ್ಯಾಕ್ಟ್ ಇರಲಿಲ್ಲ ನೀವು ಶೂನ್ಯ ವೇಳೆಯಲ್ಲಿ ಈ ವಿಷಯ ಪ್ರಸ್ತಾವ ಮಾಡಿದರೆ ನನ್ನ ಹತ್ತಿರ ಎಷ್ಟು ಮಾಹಿತಿ ಲಭ್ಯವಿದೆಯೋ ಅದನ್ನೆಲ್ಲಾ ಒದಗಿಸಿಕೊಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ನಾಳೆ ವಿಧಾನಸಭೆ ಕೊನೆಯಾಗಿರುವುದರಿಂದ ಪ್ರಶ್ನೋತರ ವೇಳೆ ಇರುವುದಿಲ್ಲ. ಆದ್ದರಿಂದ ಇದರ ಬಗ್ಗೆ ಕೊನೆ ಪಕ್ಷ ಶೂನ್ಯ ವೇಳೆಯಲ್ಲಾದರೂ ಉತ್ತರ ಕೊಡಿ. ನಾವು ತಮ್ಮಿಂದ ಈ ರೀತಿಯಾದ ಉತ್ತರವನ್ನು ನಿರೀಕ್ಷೆ ಮಾಡಿರಲಿಲ್ಲ. ಏಕೆಂದರೆ ಇದು ತಡೆಹಿಡಿದಿರುವ ಪ್ರಶ್ನೆಯಾಗಿರುವುದರಿಂದ ಉತ್ತರವನ್ನು ಸಾಧ್ಯವಾದಷ್ಟು ತರಿಸಿಕೊಡುತ್ತೇವೆ ಎಂಬ ಮಾತು ನಿಮ್ಮ ಬಾಯಿಂದ ಬರಬಾರದು.

---

* ಸಹಬಂಧ III